ದಿನಾಂಕ 02-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯವರ ಪರವಾಗಿ ಶ್ರೀ ಡಿಬಿಎಸ್ ವಕೀಲರವರಿಂದಃ**

ನನ್ನ ತಂದೆಯ ಹೆಸರು ಜೆರಲ್ ಮೆಂಡೋನ್ಸ. ಜೆರಲ್ ಮೆಂಡೋನ್ಸ ರವರ ಅಣ್ಣ ಗ್ರೆಗೋರಿ ಮೆಂಡೋನ್ಸ. ಗ್ರೆಗೋರಿ ಮೆಂಡೋನ್ಸ ರವರ ಮಕ್ಕಳೆಂದರೆ ಕ್ಲೇರ, ಅಲೆನ್ ಮತ್ತು ಆಸ್ಟಿನ್. ಸದ್ರಿ ಪ್ರಕರಣದಲ್ಲಿ ಕ್ಲೇರ ಎನ್ನುವವಳು ನನ್ನ ದೊಡ್ಡಪ್ಪನ ಮಗಳು. ಸದ್ರಿ ಪ್ರಕರಣದಲ್ಲಿ ಇವತ್ತು ಮತ್ತು ಮೊನ್ನೆ ನನಗೆ ವಿಲ್ ನ ಬಗ್ಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಅದಕ್ಕಾಗಿ ಬಂದಿದ್ದೆ. ನನಗೆ ಬಂದಿರುವ ಸಮನ್ಸ್ ನಲ್ಲಿ ಸದ್ರಿ ಪ್ರಕರಣದ ಬಗ್ಗೆ ಯಾರು ದಾವೆ ಹೂಡಿರುತ್ತಾರೆಂದು ಮತ್ತು ಯಾವುದಕ್ಕಾಗಿ ಮಾಡಿದ್ದಾರೆನ್ನುವ ವಿಷಯ ನನಗೆ ಗೊತ್ತಿರುತ್ತದೆ. ಈ ದಾವೆ ಹೂಡಿರುವ ಬಗ್ಗೆ ನನಗೆ ಕಳೆದ 2 ತಿಂಗಳ ಹಿಂದೆ ಗೊತ್ತಾಗಿರುತ್ತದೆ. ಸದ್ರಿ ವಿಷಯವನ್ನು ನನಗೆ ಕ್ಲೇರರವರು ಹೇಳಿರುತ್ತಾರೆ. ಸದ್ರಿ ವಿಷಯವನ್ನು ನನಗೆ ಪ್ರತಿವಾದಿಯವರು ಕರೆ ಮಾಡಿ ಹೇಳಿರುತ್ತಾರೆ. ನನಗೆ ಪ್ರತಿವಾದಿಯವರು ಈ ವಿಷಯಕ್ಕೆ ಮಾತ್ರ ಕರೆ ಮಾಡಿ ತಿಳಿಸಿರುತ್ತಾರೆ. ನನ್ನ ಅಣ್ಣನ ಪತ್ನಿ ದಾವೆ ಹಾಕಿರುತ್ತಾರೆ ಆ ವಿಷಯದಲ್ಲಿ ನನಗೆ ಸಾಕ್ಷ್ಯ ನುಡಿಯಲು ಇರಬಹುದು ಎಂದು ಹೇಳಿರುತ್ತಾರೆ. ಸದ್ರಿ ಸಮಯದಲ್ಲಿ ನಾನು ಮತ್ತು ಕ್ಲೇರರವರು ಫೋನಿನ ಮೂಲಕ ಮಾತನಾಡಿರುತ್ತೇವೆ ಮತ್ತು ಒಡನಾಟ ಜಾಸ್ತಿ ಇರುವುದಿಲ್ಲ ಆದರೆ ಸ್ವಲ್ಪ ಮಾತ್ರ ಇರುತ್ತದೆಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ಕ್ಲೇರ ರವರಿಗೆ ಫೋನ್ ಮಾಡಿ ನಾನು ಸಮನ್ಸ್ ಬಂದಿದ್ದ ವಿಷಯವನ್ನು ತಿಳಿಸಿರುತ್ತೇನೆ. ಸಮನ್ಸ್ ಬಂದ ನಂತರ ನಾನು ನ್ಯಾಯಾಲಯಕ್ಕೆ ನೇರವಾಗಿ ಬಂದಿರುತ್ತೇನೆ, ವಕೀಲರ ಕಚೇರಿಗೆ ಹೋಗಿರುವುದಿಲ್ಲ. ಕ್ಲೇರರವರ ವಕೀಲರು ಶ್ರೀಮತಿ ಇಲ್ಡ ಕ್ಯಾಷ್ಟೋಲಿನ ರವರು ನನ್ನ ಪರವಾಗಿ ವಕೀಲರು ಇದ್ದಾರೆಂದು

ತಿಳಿಸಿರುತ್ತಾರೆ. ನಾನು ಈ ತನಕ ಮಾನ್ಯ ವಕೀಲರ ಭೇಟಿ ಆಗಿರುವುದಿಲ್ಲ ಹಾಗೂ ಪ್ರತಿವಾದಿಯವರ ವಕೀಲರ ಪರಿಚಯ ನನಗಿರುತ್ತದೆ. ಪ್ರತಿವಾದಿಯವರ ವಕೀಲರ ಕಚೇರಿಗೆ ನನ್ನ ವೈಯಕ್ತಿಕ ವಿಷಯಕ್ಕೆ ಹೋಗಿರುತ್ತೇನೆ. ನನಗೆ ಸಂಬಂಧಪಟ್ಟಂತೆ ಬೇರೊಂದು ಪ್ರಕರಣದಲ್ಲಿ ಸಹ ಮಾನ್ಯ ವಕೀಲರು ನನ್ನ ವಕೀಲರು ಆಗಿರುತ್ತಾರೆ. ಅವರ ಪರಿಚಯ 2009 ರ ಹಿಂದಿನಿಂದ ಗೊತ್ತಿತ್ತು. ನ್ಯಾಯಾಲಯದ ಮುಂದೆ ಬಂದು ಸಾಕ್ಷ್ಯ ನುಡಿಯುವಾಗ ಮೇಲ್ಕಂಡ ವಿಷಯಗಳು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ ಏಕೆಂದರೆ ಅವರು ಕೇಳಿರುವುದಿಲ್ಲ ನಾನು ಹೇಳಿರುವುದಿಲ್ಲವೆಂದು ನುಡಿಯುತ್ತಾರೆ. ಆಸ್ಟಿನ್ ರವರ ಪತ್ನಿ ವಾದಿ ನನಗೆ ಪರಿಚಯವಿರುತ್ತಾರೆ. ಅವರು ಒಂದು ವರ್ಷದ ಹಿಂದೆ ನೋಡಿರುತ್ತೇನೆ. ಅವರು ಮತ್ತು ನನ್ನ ನಡುವೆ ಯಾವುದೇ ಒಡನಾಟ ಇರುವುದಿಲ್ಲ. ಮೃತ ಅಲೆನ್ ರವರು ಪದವಿ ಮುಗಿಸಿರುತ್ತಾರೆ. ಮೃತ ಅಲೆನ್ ರವರ ವೈಯಕ್ತಿಕ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅವರ ಕಷ್ಟ ಸುಖದ ಬಗ್ಗೆ ನನ್ನೊಡನೆ ಮಾತನಾಡಿರುವುದಿಲ್ಲ. ಅಲೆನ್ ರವರು ಕಿನ್ನಿಮುಲ್ಕಿಯ ತಂದೆಯ ಮನೆಯಲ್ಲಿ ವಾಸ ಮಾಡಿದ್ದರು. ಅವರು ಕಿನ್ನಿಮುಲ್ಕಿಯ ಖಾಯಂ ವಾಸಿ. ಅಲೆನ್ ರವರು ಮದುವೆಯಾದದ್ದು ಗೊತ್ತಿತ್ತು. ಅವರು ವಿಚ್ಛೇಧನ ಪಡೆದ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಮಕ್ಕಳಿಲ್ಲ ಎನ್ನುವುದು ಸಹ ಗೊತ್ತಿಲ್ಲ. ಕಿನ್ನಿಮುಲ್ಕಿಯ ದೊಡ್ಡ ವಠಾರ ಮತ್ತು ಅದರ ಸುತ್ತ ಮುತ್ತ 100 ಮನೆಗಳಿರುತ್ತವೆಂದರೆ ಸರಿ. ಅಲೆನ್ ರವರು ವಠಾರದ ವಾಸಿಯವರ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಂಡಿರುತ್ತಾರೆ. ಅಲೆನ್ ರವರ ತಾಯಿಯವರು ಮೃತಪಟ್ಟ ನಂತರ ಕಿನ್ನಿಮುಲ್ಕಿಯಲ್ಲಿಯೇ ಒಬ್ಬರೇ ವಾಸ ಮಾಡಿಕೊಂಡಿರುತ್ತಾರೆ. ಅಲೆನ್ ರವರು ಆಸ್ಟಿನ್ ಮತ್ತು ಅವರ ಮಕ್ಕಳು ಮತ್ತು ಕ್ಲೇರ ಮತ್ತು ಅವರ ಮಕ್ಕಳ ಜೊತೆ ಸಂಬಂಧ ಯಾವ ರೀತಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.